ಕರ್ನಾಟಕ ವಿಧಾನ ಸಭೆ

325 ಶ್ರೀ ಸುರೇಶ್ ಬಾಬು ಸಿ.ಬಿ.

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಬಿ.ಪಿ.ಎಲ್. ಕಾರ್ಡುಗಳು ಅಸಮರ್ಪಕ ವಿತರಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಇದುವರೆಗೆ ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಜನಸ್ಪಂದನ ಕಾರ್ಯಕ್ರಮದಲ್ಲಿ ಬಿಪಿಎಲ್ ಕಾರ್ಡ್ ಕೋರಿ ಬಂದಿರುವ ಅರ್ಜಿಗಳೆಷ್ಟು;

ಜನಸ್ಪಂದನ ಕಾರ್ಯಕ್ರಮದಲ್ಲಿ 10,476 ಬಿಪಿಎಲ್ ಕಾರ್ಡು ಕೋರಿ ಅರ್ಜಿಗಳು ಬಂದಿರುತ್ತವೆ.

ಇ) ಆ ಪೈಕಿ ಎಷ್ಟು ಫಲಾನುಭವಿಗಳನ್ನು ಅರ್ಹರೆಂದು ಗುರುತಿಸಲಾಗಿದೆ;

ಈ ಪೈಕಿ 3,961 ಕುಟುಂಬಗಳನ್ನು ಬಿಪಿಎಲ್ ಎಂದು ಗುರುತಿಸಲಾಗಿದೆ.

ಈ) ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲು ಕೈಗೊಂಡಿರುವ ಕ್ರಮಗಳೇನು;

ಪಡಿತರ ಚೀಟಿ ಪಡೆಯದೆ ಇರುವಂತಹ ಕುಟುಂಬಗಳಿಗೆ ನೆಮ್ಮದಿ ಕೇಂದ್ರಗಳ ಮುಖಾಂತರ ಪಡಿತರ ಚೀಟಿಗಳನ್ನು ನೀಡಲು ಸರ್ಕಾರದ ಆದೇಶದನ್ವಯ ತುಮಕೂರು ಜಿಲ್ಲೆಯಲ್ಲಿ 55 ನೆಮ್ಮದಿ ಕೇಂದ್ರಗಳ ಮೂಲಕ 1,64,131 ಅರ್ಜಿಗಳನ್ನು ವಿತರಿಸಿ, ದಿ:19-02-2009 ರ ವರೆಗೆ 1,28,353 ತಾತ್ಕಾಲಿಕ ಪಡಿತರ ಕೂಪನ್ ವಿತರಿಸಿದ್ದು, ವಿತರಣೆ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಉ) ಹಾಗಿದ್ದಲ್ಲಿ, ಇನ್ನೆಷ್ಟು ದಿನಗಳಲ್ಲಿ ಬಿಪಿಎಲ್ ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ಮರು ಹಂಚಿಕೆ ಮಾಡಲಾಗುವುದು?

ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಲಾದ ಪಡಿತರ ಚೀಟಿ ಕೋರಿಕೆ ಅರ್ಜಿಗಳಿಗೆ, ತಾತ್ಕಾಲಿಕ ಪಡಿತರ ಚೀಟಿಗಳನ್ನು ವಿತರಿಸಲು ಫೆಬ್ರವರಿ 2009ರ ಅಂತ್ಯದವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ.

ಆನಾಸ 39 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು